ಅಧ್ಯಕ್ಷರು.—(ಸಿ) ಪ್ರಶ್ನೆಗೆ ಸಂಬಂಧಪಟ್ಟಂತೆ ಉತ್ತರ ಹೇಳಿದ್ದಾರಲ್ಲ.

ಶ್ರೀ ಡಿ. ಆರ್. ಕರಿಗೌಡ.—ಆರು ವರ್ಷಗಳ ಕಾಲಾವಧಿಯವರೆಗೆ ಎಂದು ಕರೆಸಿಕೊಂಡಿದ್ದರು. ಅವರವೇ್ಲೆ ಇನ್ನೂ ಏನಾದರೂ ದೂರುಗಳು ಬಂದಿದ್ದುವೇ, ಸ್ವಾಮಿ?

*ಡಾ॥ ಆರ್. ನಾಗನಗೌಡ.—ಅವರನ್ನು ಮೊದಲು ಒಂದು ವರ್ಷಕ್ಕೆ ತೆಗೆದುಕೊಂಡರು, ಆಮೇಲೆ ಮೂರು ವರ್ಷ ಎಕ್ಸ್‌ಟೆಂಡ್ ಮಾಡಿದರು. ಮತ್ತೆ ಪುನಃ ಮೂರು ವರ್ಷ ಎಕ್ಸ್‌ಟೆಂಡ್ ಮಾಡಿದರು. ಹೀಗೆ ಅವರಿಗೆ ಅಗತ್ಯ ಕಂಪಹಾಗೆನ್ನಾ ಇಟ್ಟುಕೊಂಡಿದ್ದಾರೆ. ಅವರಿಗೆ ಬೇಕಿಲ್ಲದೇ ಇದ್ದಾಗ ಕಳುಹಿಸಿ ಕೊಟ್ಟಿದ್ದಾರೆ, ಅಷ್ಟೆ.

ಶ್ರೀ ಡಿ. ಆರ್. ಕರಿಗೌಡ.—ಅವರ ಮೇಲೆ ಕೇಂದ್ರ ಸರ್ಕಾರದವರಿಗೆ ದೂರು ಬಂದು, ವಾಪಸು ಕಳುಹಿಸಿ ಕೊಟ್ಟರೇ?

ಡಾ॥ ಆರ್. ನಾಗನಗೌಡ.—ಇಲ್ಲ.

ಶ್ರೀ ಬಿ. ಎಸ್. ಬೋರಣ್ಣಗೌಡ.—ಅವರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಾಗಿ ಎಷ್ಟು ದಿವಸ ಕೆಲಸ ಮಾಡಿದ್ದಾರೆ ಹೇಳುತ್ತೀರಾ?

ಡಾ॥ ಆರ್. ನಾಗನಗೌಡ.—ಅವರು ನಮ್ಮಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಾಗಿ ಬಹಳ ದಿವಸ ಇದ್ದರೇ ಇಲ್ಲವೇ ಎಂಬುದನ್ನು ಹೇಳುವುದಕ್ಕೆ ಸಾಧ್ಯ ವಿಲ್ಲ. I cannot lay my hands on that information.

ಶ್ರೀ ಬಿ. ಎ . ಬೋರಣ್ಣಗೌಡ.—ಹಾಗೆ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಾಗಿ ಕೆಲಸಮಾಡದೇ ಫಾರೆಸ್ಟ್ ಕನ್ಸರ್ವೇಟರಾಗಿ ನೇಮಕಮಾಡಿದ್ದೀರಲ್ಲ, ಅವರಿಗೆ ಚೆನ್ನಾಗಿ ಕೆಲಸ ಗೊತ್ತಿದೆ ಎಂದು ತಿಳಿದು ಕೊಂಡಿದ್ದೀರಾ?

ಡಾ॥ ಆರ್. ನಾಗನಗೌಡ.—ಮೊದಲು ಅಸಿಸ್ಟೆಂಟ್ ಕನ್ಸರ್ವೇಟರ್ ಆಗಿದ್ದರು. His services were lent to the Government of India and then by efflux of time and when vacancies arose he was normally promoted as Conservator of Forests even while he was working in Dehra Dun.

ಶ್ರೀ ಬಿ. ಎಸ್. ಬೋರಣ್ಣಗೌಡ.—ಅಸಿಸ್ಟೆಂಟ್ ಕನ್ಸರ್ವೇಟರ್ ಆಗಿ ನೇಮಕಮಾಡಿಕೊಂಡಿದ್ದಾಗ್ಯೂ ಅವರು ಎಕ್ಸಿಕ್ಯೂಟೀವ್ ವರ್ಕ್‌ನಲ್ಲಿ ಇದ್ದರೇ?

Dr. R. NAGAN GOWDA.—I believe so.

Sri V. M. MASCARENHAS.—You said, Sir, that the Government was not aware of any report against this officer; is that information to the House correct?

Dr. R. NAGAN GOWDA.—Any report which is not of a confidential nature has not been received.

Sri V. M. MASCARENHAS.—You were pleased to say that there were no complaints against this officer by the Central Government. Is that correct?

Dr. R. NAGAN GOWDA.—Yes, I maintain that what I have said is correct.

Sri V. M. MASCARENHAS.—Were not serious strictures passed against this officer by the Central Government? Was he not asked to quit the place handing over charge immediately?

Dr. R. NAGAN GOWDA.—Matters that are of a confidential nature cannot be revealed.

Sri V. M. MASCARENHAS.—Is an officer of this kind worthy to hold any responsible position in this State?

Mr. SPEAKER.—It is a matter of opinion.

Sri B. NARAYANASWAMY.—Sir, is not this officer a very highly qualified officer?

Dr. R. NAGAN GOWDA.—He holds high academic distinctions and he has done good work.

Sri B. NARAYANASWAMY.—Was not this officer the District Forest Officer at Chikmagalur, Hassan and Mysore before he went to the Government of India service?

Dr. R. NAGAN GOWDA.—I think so.

Sri B. NARAYANASWAMY.—Is he not a very efficient officer and that is why he has now been Conservator of Forests at Shimoga?

Dr. R. NAGAN GOWDA.—Yes. His services were required by the Government of India because they thought that he would be useful to them.

Sri B. NARAYANASWAMY.—Sir, did not this officer serve as Secretary in the Confidential Section at Dehra Dun?

Dr. R. NAGAN GOWDA.—Yes.

N.E.S. Centre for Hiriyur Taluk.

Q.—312. **Sri T. HANUMIAH** (Hiriyur—Scheduled Castes).—

Will the Government be pleased to state:—

(*a*) the facilities that should be available in a place or taluk for recommending to start a National Extension Service Centre there;

(*b*) whether any preliminary survey has been conducted or statistics collected in the places where N. E. S.

centres were recommended to be started before so recommending ;

(*c*) the nature of such survey undertaken and statistics collected ;

(*d*) whether they would consider the feasibility of starting a N. E. S. centre in Hiriyur Taluk ?

A.—**Dr. R. NAGAN GOWDA** (Minister for Agriculture).—

(*a*) None.

(*b*) No.

(*c*) Does not arise in view of reply to (*b*) above.

(*d*) Yes.

ಶ್ರೀ ಟಿ. ಹನುಮಯ್ಯ.—ಸ್ವಾಮಿ, (d) ಪ್ರಶ್ನೆಗೆ ಉತ್ತರವಾಗಿ ಹೌದು ಎಂದು ಹೇಳಿದ್ದೀರಿ. ಮುಂದೆ ಮಾಡುವ N.E.S. ಬ್ಲಾಕುಗಳಲ್ಲಿ ಹಿರಿಯೂರು ತಾಲ್ಲೂಕಿಗೆ ಒಂದು ಬ್ಲಾಕನ್ನು ಕೊಡುವುದಕ್ಕೆ ಸರ್ಕಾರದವರು ಭರವಸೆ ಕೊಡುತ್ತಾರೆಯೇ ?

ಡಾ॥ ಆರ್. ನಾಗನಗೌಡ.—ಭರವಸೆ ಕೊಡುವುದು ಬಹಳ ಕಷ್ಟ.

ಶ್ರೀ ಟಿ. ಹನುಮಯ್ಯ.—ಕೊಡುವುದಕ್ಕೆ ಯೋಚನೆ ಮಾಡುತ್ತಾರೆಯೇ ?

ಡಾ॥ ಆರ್. ನಾಗನಗೌಡ.—ಬ್ಲಾಕ್ ಕೊಡುವ ವಿಷಯ ಯೋಚನೆ ಮಾಡುತ್ತೇವೆ. ಭರವಸೆ ಕೊಡುವುದಕ್ಕೆ ಯೋಚನೆ ಮಾಡುವ ಅವಶ್ಯಕತೆ ಇಲ್ಲ.

Factory for concentration of Manganese Ore in Chiknayakanhalli.

Q.—306. **Sri B. HUTCHE GOWDA** (Turuvekere).—

Will the Government be pleased to state :—

(*a*) whether it is not a fact that the Committee for the mineral development has proposed to instal a factory for concentration of manganese ores either at Chiknayakanahalli or near about a suitable place ;

(*b*) the action they propose to take in this matter ?

A.—**Sri H. M. CHANNABASAPPA** (Minister for Industries).—

(*a*) Yes.

(*b*) The recommendations of the Committee are under the consideration of Government.

ಶ್ರೀ ಬಿ. ಹುಚ್ಚೇಗೌಡ.—'ಬಿ' ಭಾಗಕ್ಕೆ ಉತ್ತರವಾಗಿ ' The recommendations of the Committee are under the consideration of Government ' ಎಂದು ಹೇಳಿದ್ದೀರಿ. ಇದಕ್ಕೆ ಎಷ್ಟುಕಾಲ ಬೇಕಾಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಹಳ ಬೇಗ ತೀರ್ಮಾನಕ್ಕೆ ಬರುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಒಂದು ಪ್ಲಾಂಟನ್ನು ಪ್ರಾರಂಭ ಮಾಡಬೇಕಾದ್ದಕ್ಕೆ ಜರೂರಾತಿ ಇದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಚಿಕ್ಕನಾಯಕನ ಹಳ್ಳಿಯಲ್ಲಿ ಈ ಪ್ಲಾಂಟನ್ನು ಹಾಕಬೇಕೆನ್ನುವ ವಿಷಯ ನಮ್ಮಕ್ಕೆ ಪರ್ಯಾಲೋಚನೆಯಲ್ಲಿಲ್ಲ. ಕುಂಸಿ ಬಳಿ ಹಾಕಬೇಕೆಂಬ ವಿಷಯ ಪರ್ಯಾಲೋಚನೆಯಲ್ಲಿದೆ. ಎನ್ನಡನೆ ಪಾಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಹಣವನ್ನು ನಹ ಒದಗಿಸಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಚಿಕ್ಕನಾಯಕನಹಳ್ಳಿಯಿಂದ ಬೇಕಾದಷ್ಟು ಮ್ಯಾಂಗನೀಸ್ ಅದಿರು ರಫ್ತಾಗುತ್ತಿರುವ ವಿಚಾರ ಸರ್ಕಾರಕ್ಕೆ ಗೊತ್ತಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿರತಕ್ಕ ಗಣಿ ಪ್ರಾಂತ್ಯಗಳಲ್ಲಿ ಬಹುಭಾಗವನ್ನು ಖಾಸಗಿಯವರಿಗೆ ಲೀಸ್ ಕೊಟ್ಟಿದ್ದೇವೆ. ಬೇಕಾದಷ್ಟು ಮ್ಯಾಂಗನೀಸ್ ರಫ್ತಾಗುತ್ತಿದೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಇಲ್ಲಿಯೂ ಕೂಡ ಒಂದು Concentration Plant ಹಾಕುವುದರಿಂದ ಬಹುಮಟ್ಟಿಗೆ ಸಾಗಾಣಿಕೆ ವಗೈರೆ ಖರ್ಚು ಉಳಿತಾಯವಾಗಿ ರಾಷ್ಟ್ರಾಭಿವೃದ್ಧಿಗೆ ಅನುಕೂಲವಾಗುತ್ತದೆಯಲ್ಲವೆ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ರಾಷ್ಟ್ರದ ಅಭಿವೃದ್ಧಿಗೆ ಅನುಕೂಲವಾಗುತ್ತದೆಂಬುದೇ ಸರ್ಕಾರದ ಗಮನದಲ್ಲಿದೆ. ಕುಂಸಿಯಲ್ಲಿ ಮೊದಲು ಒಂದು ಪ್ಲಾಂಟ್ ಹಾಕಿ, ಅದರ ಅನುಕೂಲತೆ ಮತ್ತು ಸಾಧಕ ಬಾಧಕಗಳನ್ನು ನೋಡಿಕೊಂಡು ಬೇರೆ ಕಡೆಯಲ್ಲೂ ಕೂಡ ಪ್ರಾರಂಭ ಮಾಡಬೇಕೆಂಬುದು ಸರ್ಕಾರದ ಅಭಿಪ್ರಾಯ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಪ್ರೈವೇಟ್ ಎಂಟರ್ ಪ್ರೈಸ್‌ಗೆ ಸರ್ಕಾರದವರು ಪ್ರೋತ್ಸಾಹ ಕೊಟ್ಟು ದ್ರವ್ಯಸಹಾಯ ಮಾಡುವುದಕ್ಕಾಗುವುದಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಾರ್ವಜನಿಕರು ಮುಂದೆ ಬಂದಲ್ಲಿ ಈ ವಿಷಯವನ್ನು ಪರಿಶೀಲಿಸಬಹುದು. ಈಗ ಶ್ರೀ ರಾಮದಾಸ್ ಎಂಬವರು ಅಮೃತೂರು ಪ್ರಾಂತದಲ್ಲಿ ಒಂದು ಪ್ಲಾಂಟ್‌ಹಾಕಲು ಸರ್ಕಾರದ ಸಹಾಯವನ್ನು ಕೇಳಿದ್ದಾರೆ. ಅದನ್ನು ಸರ್ಕಾರದವರು ಪರ್ಯಾಲೋಚನೆ ಮಾಡುತ್ತಿದ್ದಾರೆ.

ಶ್ರೀ ಸಿ. ಎಚ್. ಲಿಂಗದೇವರು.—ಒಂದು ಪ್ಲಾಂಟ್ ಹಾಕುವುದಕ್ಕೆ ಎಷ್ಟು ಖರ್ಚಾಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ದಿವಸಕ್ಕೆ 150 ಟ್ಸ್ ಪ್ರೋಸೆಸ್ ಮಾಡತಕ್ಕದ್ದಕ್ಕೆ 25 ಲಕ್ಷ ರೂಪಾಯಿಗಳು ಖರ್ಚಾಗುತ್ತವೆ. 50 ಟ್ಸ್ ಪ್ರೋಸೆಸ್ ಮಾಡತಕ್ಕದ್ದಕ್ಕೆ 10 ಲಕ್ಷ ರೂಪಾಯಿಗಳು ಖರ್ಚಾಗುತ್ತವೆ.

ಶ್ರೀ ಸಿ. ಎಚ್. ಲಿಂಗದೇವರು.—ಇದರಲ್ಲಿ ಸಣ್ಣ ಪ್ಲಾಂಟನ್ನಾದರೂ ಚಿಕ್ಕನಾಯ್ಕನಹಳ್ಳಿ ಪ್ರಾಂತದಲ್ಲಿ ಹಾಕುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಕುಂಸಿ ಬಳಿ ಹಾಕಬೇಕೆಂದಿರುವುದೇ ಸಣ್ಣ ಪ್ಲಾಂಟ್. ಅದಕ್ಕೆ 10 ಲಕ್ಷ ರೂಪಾಯಿಗಳು ಖರ್ಚಾಗುತ್ತವೆ. ಇದಕ್ಕಾಗಿ ಪಾಂಚವಾರ್ಷಿಕ ಯೋಜನೆಯಲ್ಲಿ ಐದು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ.